# ಆಕರ್ಷಕ ಕಾಲ್ಗೆಜ್ಜೆ



ಪಾಯಲ್, ಆ್ಯಂಕ್ಲೆಟ್ ಅಥವಾ ಕಾಲ್ಗೆಜ್ಜೆ ಮಹಿಳೆಯರಿಗೆ ಪ್ರಿಯವಾದ ಆಭರಣ. ಪಾದವನ್ನು ಆವರಿಸುವ ಈ ಒಡವೆಯಲ್ಲಿ ನೂರೆಂಟು ವೈವಿಧ್ಯವಿದೆ.

■ ಆಶಾ ಎಸ್. ಕುಲಕರ್ಣಿ

ಹಿಂದೆ ಕಾಲ್ಗೆಜ್ಜೆ ಎಂದರೆ ಬೆಳ್ಳಿಯಿಂದ ತಯಾರಿಸಿದ ಆಭರಣ ಮಾತ್ರವೇ ಆಗಿತ್ತು. ಹುಡುಗಿ ನಡೆದುಕೊಂಡು ಬರುವಾಗ ಘಲ್ ಘಲ್ ಸದ್ದು ಮನೆ ತುಂಬ ಆವರಿಸಿ ಒಂದು ರೀತಿಯ ಭಾವನಾತ್ಮಕತೆ ಸೃಷ್ಟಿಸುತ್ತಿತ್ತು. ಪುಟಾಣಿ ಹೆಣ್ಣುಮಗು ತುಂಬ ಗೆಜ್ಜೆಗಳಿರುವ ಕಾಲ್ಚೈನ್ ಧರಿಸಿ ಓಡಾಡಿದರಂತೂ ಮನೆಯಲ್ಲಿ ಸಂಭ್ರಮವೋ ಸಂಭ್ರಮ.

ಈಗ ಕಾಲ್ಗೆಜ್ಜೆಯಲ್ಲಿ ನೂರಾರು ವೈವಿಧ್ಯ ಬಂದಿದ್ದು, ಆ್ಯಂಕ್ಲೆಟ್, ಪಾಯಲ್ ಹೆಸರಿನಲ್ಲಿ ಮನೆಮಾತಾಗಿವೆ. ಉಡುಪಿಗೆ ಮ್ಯಾಚಿಂಗ್ ಮಾಡುವಂಥ ಪಾಯಲ್ ಕೂಡ ಫ್ಯಾಷನಬಲ್ ಆಗಿರುವ ಜೊತೆಗೆ ಎಲಿಗೆಂಟ್ ಲುಕ್ ನೀಡಲು ಸಹಕಾರಿಯಾಗಿದೆ.

ಪಾಯಲ್ ಎಂದರೆ ಇಂದಿಗೂ ಹೆಂಗಳೆಯರಿಗೆ ಅದೇನೋ ಆಕರ್ಷಣೆ. ಮನೆ ಹತ್ತಿರವೇ ಇದ್ದ ಫ್ಯಾನ್ಸಿ ಸ್ಟೋರ್‌ಗೆ ಹೋದರೆ ಅಲ್ಲಿ ಕಾಲಿಡಲೂ ಆಗದಿರುವಷ್ಟು ಗಜಿಬಿಜಿಯಾಗಿತ್ತು. ಅಂಗಡಿ ತುಂಬೆಲ್ಲ ಕಾಲೇಜು ಹುಡುಗಿಯರೇ. ಇಷ್ಟು ಆಸಕ್ತಿಯಿಂದ ಏನು ನೋಡ್ತಿದಾರೆ ಅಂತ ಇಣುಕಿ ನೋಡಿದರೆ ಬಣ್ಣಬಣ್ಣದ ಕಾಲ್ಗೆಜ್ಜೆಗಳನ್ನು ಖುಷಿಯಿಂದ ಆಯ್ದುಕೊಳ್ಳುತ್ತಿದ್ದರು.

ಹಿಂದಿನ ಕಾಲದಲ್ಲಿ ಈ ಗೆಜ್ಜೆಗೆ ಒಂದು ವಿಶೇಷ ಸ್ಥಾನಮಾನವಿತ್ತು. ಮುತ್ತೈದೆಯರು ಕಡ್ಡಾಯವಾಗಿ ಗೆಜ್ಜೆಯನ್ನು ಧರಿಸಲೇಬೇಕು ಎಂಬ ಸಂಪ್ರದಾಯವಿತ್ತು. ಅದು ಅವರ ಮುತ್ತೈದೆತನದ ಸಂಕೇತವೂ ಆಗಿತ್ತು. ಈಗ ಜಮಾನಾ ಬದಲಾಗಿದೆ. ಯಾವ ಡ್ರೆಸ್‌ಗೆ ಬೇಕಾದರೂ ಮ್ಯಾಚ್ ಆಗುವಂತಹ, ಯಾವ ಕಲರ್‌ಗೆ ಬೇಕಾದರೂ ಹೊಂದುವಂತಹ ಬಣ್ಣ ಬಣ್ಣದ ಗೆಜ್ಜೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ.

ಸೀರೆ ಉಟ್ಟಾಗ ಅಥವಾ ಸಾಂಪ್ರದಾಯಿಕ ಉಡುಗೆ ತೊಟ್ಟಾಗ ಮಾತ್ರ ಗೆಜ್ಜೆ ಧರಿಸಬೇಕೆಂಬ ಕಾಲ ಈಗಿಲ್ಲ. ಕಾಲೇಜು ಲಲನೆಯರು ಪ್ಯಾಂಟ್ ಶರ್ಟ್ ತೊಟ್ಟರೂ ಅದಕ್ಕೊಪ್ಪುವಂತಹ ಗೆಜ್ಜೆ ಈಗ ಲಭ್ಯ. ಅದರಲ್ಲೂ ಪಾದಗಳ ಗಾತ್ರಕ್ಕೆ ಹೊಂದುವಂತಹ ಗೆಜ್ಜೆಗಳಿಗೇನು ಕೊರತೆಯಿಲ್ಲ. ಒಂದೆಳೆಯ ಚೈನಿನಿಂದ ಹಿಡಿದು, ದಪ್ಪದ ಪಾಯಲ್‌ಗಳು ಸಿಗುತ್ತಿವೆ.



ಈಗಿನ ದುಬಾರಿ ಯುಗದಲ್ಲಿ ಕೈಗೆಟುಕದಿರುವ ಬೆಳ್ಳಿ ಬಂಗಾರದ ಮುಂದೆ, ಕೈಗೆಟುಕುವ ಇಂತಹ ಫ್ಯಾಷನ್ ಚೈನ್ ಕೊಳ್ಳುವುದು ಮೇಲಲ್ಲವೆ? ಗೋಲ್ಡ್ ಕವರಿಂಗ್ ಮೇಲೆ ಎಲ್ಲಾ ಬಣ್ಣ ಬಣ್ಣದ ಕುಂದನ್ ಅಂಟಿಸಿರುವ ಈ ಗೆಜ್ಜೆಗಳು ನೋಡಲು ಹೆಚ್ಚು ಆಕರ್ಷಕವಾಗಿಯೂ, ಬಂಗಾರದ ತರಹ ಕಾಣುವ ಈ ಪಾಯಲ್‌ಗಳನ್ನು ಧರಿಸಲು ಹೆಂಗಳೆಯರು ಮುಗಿಬೀಳುತ್ತಿದ್ದಾರೆ. ಇವತ್ತಿಗೂ ಕೂಡ ಮದುವೆ ಸಮಾರಂಭದಲ್ಲಿ ವಧು ತನ್ನ ಎಲ್ಲಾ ಅಲಂಕಾರ ಮುಗಿಸಿ ಕೊನೆಗೆ ಗೆಜ್ಜೆ ಧರಿಸಿದಾಗ ಮಾತ್ರ ಅವಳ ಅಲಂಕಾರ ಪೂರ್ಣಗೊಳ್ಳುತ್ತದೆ. ಇನ್ನು ಹಬ್ಬ, ಹರಿದಿನಗಳು, ಮದುವೆ ಸಮಾರಂಭಗಳು ಪ್ರಾರಂಭವಾದರೆ ಫ್ಯಾನ್ಸಿ ಸ್ಟೋರ್‌ಗಳಲ್ಲಿ ಈ ತರಹದ ಪಾಯಲ್‌ಗಳ ಮಾರಾಟ ಜೋರು.

ಬೀಡ್ಸ್ ಹಾಗೂ ಥ್ರೆಡ್‌ನಿಂದ ತಯಾರಿಸಿದ ಆ್ಯಂಕ್ಲೆಟ್‌ಗಳು ಕಾಲೇಜು ಯುವತಿಯರ ಹಾಟ್ ಫೇವರೆಟ್ ಎನಿಸಿಕೊಂಡಿವೆ. ಸಿಂಗಲ್ ಥ್ರೆಡ್, ಡಬಲ್ ಥ್ರೆಡ್ ಹಾಗೂ ಥ್ರೀ ಲೇಯರ್‌ಗಳಿಂದ ಕೂಡಿದ್ದು, ನೋಡಲು ಅತ್ಯಂತ ಆಕರ್ಷಕವಾಗಿದ್ದು ಎಲ್ಲರ ಗಮನಸೆಳೆಯುತ್ತಿವೆ.

## ಪಾಯಲ್ ಆಯ್ಕೆ ಹೇಗಿರಬೇಕು?

- ದಪ್ಪ ಇರುವವರಿಗೆ ಒಂದೆಳೆ ಚೈನಿನಂತಹ ಗೆಜ್ಜೆಯನ್ನು ಆಯ್ದುಕೊಳ್ಳಿ.
- ದಿನನಿತ್ಯದ ಬಳಕೆಗಾಗಿ ಖರೀದಿಸುವಾಗ ಮತ್ತು ಮಳೆಗಾಲದ ಬಳಕೆಗೆ ಹೆಚ್ಚು ಗ್ರ್ಯಾಂಡ್ ಅನಿಸುವಂತಹದ್ದನ್ನು ಆಯ್ಕೆ ಮಾಡಿಕೊಂಡರೆ ಬಾಳಿಕೆ ಕಡಿಮೆ.
- ಅತಿ ಹೆಚ್ಚು ಮುತ್ತುಗಳಿರುವ ಗೆಜ್ಜೆಯನ್ನು ಆರಿಸಿಕೊಳ್ಳಬೇಡಿ. ಬೇಗ ಹಳತಾದಂತೆ ಕಾಣಿಸುತ್ತವೆ. ■